**ಕರ್ನಾಟಕ ವಿಧಾನ ಪರಿಷತ್ತು**

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **766**
2. ಸದಸ್ಯರ ಹೆಸರು : ಶ್ರೀ ಎನ್. ರವಿಕುಮಾರ್ (ವಿಧಾನಸಭಾ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 30.01.2026
4. ಉತ್ತರಿಸುವವರು : ಮಾನ್ಯ ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರೂ.850 ಕೋಟಿ ಬಾಕಿ ಇದ್ದರೂ ಎಸಿಸಿ ಕಂಪನಿಗೆ ಲೆಟರ್ ಆಫ್ ಇಂಟೆಂಟ್ ವಿಸ್ತರಿಸಲು ಕಾರಣವೇನು; | ಭಾರತ ಸರ್ಕಾರದ The Mines and Minerals (Development and Regulation) Act, 1957 (ಎಂ.ಎಂ.ಡಿ.ಆರ್ ಅಧಿನಿಯಮ) ಮತ್ತು Mineral (Auction) Rules 2015 ರಂತೆ ಗಣಿ ಪ್ರದೇಶಗಳ ಹರಾಜು ಪ್ರಕ್ರಿಯೆ ಕೈಗೊಳ್ಳಲಾಗಿರುತ್ತದೆ.<br>ಕಲಬುರಗಿ ಜಿಲ್ಲೆ, ಚಿತ್ತಾಪುರ ತಾಲ್ಲೂಕು, ಕಣ್ಣೂರುವಾಡಿ ಮತ್ತು ಬೊಮ್ಮನಹಳ್ಳಿ ಗ್ರಾಮಗಳ ವ್ಯಾಪ್ತಿಯಲ್ಲಿನ ಸುಣ್ಣದ ಕಲ್ಲಿನ ಬ್ಲಾಕ್ ನ್ನು ದಿನಾಂಕ: 05.10.2020 ರ Notification & Notice inviting tender ರಡಿ ದಿನಾಂಕ:19.12.2020 ರಂದು ನಡೆದ ಇ- ಹರಾಜಿನಲ್ಲಿ ಮೆ॥ಎ.ಸಿ.ಸಿ ಲಿಮಿಟೆಡ್ ರವರು 35.15% ಅತೀ ಹೆಚ್ಚು ಬಿಡ್ ಮೊತ್ತ ನಮೂದು ಮಾಡಿ ಪಡೆದಿರುತ್ತಾರೆ.<br>ಅದರಂತೆ ದಿನಾಂಕ:19.12.2020 ರಂದು ನಿಯಮಾನುಸಾರ Preferred Bidder ಎಂದು ಘೋಷಿಸಲಾಗಿರುತ್ತದೆ. Mineral (Auction) Rules 2015 ರಂತೆ, ಆಗ ಚಾಲ್ತಿಯಿದ್ದ ನಿಯಮಾವಳಿಗಳಂತೆ ಸದರಿ ಬಿಡ್ಡುದಾರರು ಹರಾಜಾದ ಪ್ರದೇಶದ Upfront Payment ನ್ನು ಮೂರು ಕಂತುಗಳಲ್ಲಿ (10%, 10% ಮತ್ತು 80% of upfront Payment) ಪಾವತಿಸಬೇಕಾಗಿರುತ್ತದೆ. ಈ ಪ್ರಕರಣದಲ್ಲಿ ರೂ.78.59 ಕೋಟಿ Upfront Payment ರ ಮೊದಲನೇ ಕಂತನ್ನು ದಿನಾಂಕ:28.12.2020 ರಂದು ಪಾವತಿಸಲಾಗಿರುತ್ತದೆ. Letter of Intent ವಿತರಿಸಲು ಬಿಡ್ಡುದಾರರು Upfront Payment ನ ಮೊದಲ ಕಂತು ಪಾವತಿಸಿದ ನಂತರ Letter of Intent ಜಾರಿ ಮಾಡುವುದು ನಿಯಮಾನುಸಾರ ಕಡ್ಡಾಯವಾಗಿರುತ್ತದೆ. ಅದರಂತೆ ಬಿಡ್ಡುದಾರರಿಗೆ ದಿನಾಂಕ:04.01.2021 ರಂದು Letter of Intent ಜಾರಿ ಮಾಡಲಾಗಿರುತ್ತದೆ. ಸದರಿ Letter of Intent ಅವಧಿ 03 ವರ್ಷ ಮಾತ್ರವಿದ್ದು, ಮತ್ತೆ 02 ವರ್ಷಗಳ ಅವಧಿಗೆ ವಿಸ್ತರಿಸಲು ನಿಯಮ 10(6) ರಡಿ ಅವಕಾಶವಿರುತ್ತದೆ. ಸದರಿ ನಿಯಮದ ಉದ್ಧೃತ ಭಾಗ ಈ ಕೆಳಕಂಡಂತಿದೆ;<br>Provided further that the State Government may allow a further period of two years for execution of the Mining Lease Deed if the reasons for delay were beyond the control of the preferred bidder.<br>ಸದರಿ ನಿಯಮದಂತೆ ರಾಜ್ಯ ಸರ್ಕಾರವು 02 ವರ್ಷಗಳ ಅವಧಿಗೆ Letter of Intent ನ್ನು ವಿಸ್ತರಿಸಿರುತ್ತದೆ. |

| | | |
|---|---|---|
| (ಆ) | ಕಣ್ಣೂರು ವಾಡಿ ಸುಣ್ಣದಕಲ್ಲು ಬ್ಲಾಕ್‌ಗೆ ಗಣಿ ಅಭಿವೃದ್ಧಿ ಮತ್ತು ಉತ್ಪಾದನಾ ಒಪ್ಪಂದ ಕಾರ್ಯಗತಗೊಳಿಸಲು ನ್ಯಾಯಾಲಯದ ಮುಂದೆ ಪ್ರಕರಣ ಬಾಕಿ ಇದ್ದಾಗಲೂ ಶಿಫಾರಸ್ಸು ಮಾಡಲು ಕಾರಣವೇನು; (ವಿವರ ನೀಡುವುದು); | ಕಣ್ಣೂರುವಾಡಿ ಸುಣ್ಣದಕಲ್ಲು ಬ್ಲಾಕ್ Letter of Intent ಅವಧಿಯು ಮೂಲತಃ ದಿನಾಂಕ:03.01.2024 ಕ್ಕೆ ಅಂತ್ಯಗೊಂಡಿರುತ್ತದೆ. ಪುನಃ 02 ವರ್ಷ ಅವಧಿ ವಿಸ್ತರಿಸಲು ರಾಜ್ಯ ಸರ್ಕಾರಕ್ಕೆ ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ. ತದನಂತರ ಅವಧಿ ವಿಸ್ತರಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವಿರುವುದಿಲ್ಲ. ಈ ಪ್ರಕರಣದಲ್ಲಿ ಕಂಪನಿಯು ಮನವಿ ಸಲ್ಲಿಸಿ, ಗಣಿ ಗುತ್ತಿಗೆ ಕಾರ್ಯಗತಗೊಳಿಸಲು ವಿನಂತಿಸಿರುತ್ತದೆ. ಈ ಕಂಪನಿಯು ಮತ್ತೊಂದು ಗಣಿಗುತ್ತಿಗೆ ಪ್ರಕರಣದಲ್ಲಿ ಸರ್ಕಾರಕ್ಕೆ ಬಾಕಿ ಪಾವತಿಸುವುದು ಇದ್ದುದರಿಂದ Mine Development and production Agreement ನ್ನು ಕಾರ್ಯಗತಗೊಳಿಸಿರುವುದಿಲ್ಲ. Letter of Intent ಅವಧಿ ಮುಕ್ತಾಯವಾದ ಕಾರಣ ಮತ್ತು ಈ ಕಂಪನಿಯ ಮತ್ತೊಂದು ಗಣಿಗುತ್ತಿಗೆ ಪ್ರಕರಣದಲ್ಲಿ ಸರ್ಕಾರಕ್ಕೆ ಬಾಕಿ ಹಾಗೂ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣಗಳು ಬಾಕಿ ಇರುವುದರಿಂದ ಕೇಂದ್ರ ಸರ್ಕಾರಕ್ಕೆ ವಿವರವಾದ ಅಂಶಗಳನ್ನು ಉಲ್ಲೇಖಿಸಿ ಪತ್ರ ಬರೆಯಲಾಗಿರುತ್ತದೆ. |
| (ಇ) | 2020ರ ಅಕ್ಟೋಬರ್ ದ ಅಧಿಸೂಚನೆಯ ಪ್ರಕಾರ 2 ವರ್ಷಗಳ ಕಾಲ ಅಕ್ರಮ ಗಣಿಗಾರಿಕೆ ನಡೆಸಿದ ಕಂಪನಿಗೆ ಲೆಟರ್ ಅಫ್ ಇಂಟೆಂಟ್ ನೀಡಲು ಸರ್ಕಾರದ ನಿಲುವೇನು?(ವಿವರ ನೀಡುವುದು) | ಕಣ್ಣೂರುವಾಡಿ ಸುಣ್ಣದಕಲ್ಲು ಬ್ಲಾಕ್‌ನ್ನು ಹರಾಜು ಮೂಲಕ ವಿಲೇವಾರಿ ಮಾಡಿದ್ದು, Letter of Intent ನೀಡುವ ಸಂದರ್ಭದಲ್ಲಿ ಬಿಡ್ಡುದಾರರು Upfront Payment ನ ಮೊದಲ ಕಂತು ಪಾವತಿಸಿದ್ದ ಬಗ್ಗೆ ಪರಿಶೀಲಿಸಿ Letter of Intent ಜಾರಿ ಮಾಡಬೇಕಾಗಿರುತ್ತದೆ. ಅದರಂತೆ, ಕ್ರಮವಹಿಸಲಾಗಿದೆ. ಮುಂದುವರೆದು, ನಂತರದ ದಿನಗಳಲ್ಲಿ ಕಂಪನಿಯು ಬಾಕಿ ಮೊತ್ತ ಮತ್ತು ದಂಡ ಪಾವತಿಸದೇ ಇರುವ ಕಾರಣ ಕರಾರು ಒಪ್ಪಂದ ಜಾರಿಯಾಗಿರುವುದಿಲ್ಲ. ಎಂಎಂಡಿಆರ್ ಕಾಯ್ದೆ ಮತ್ತು Mineral (Auction) Rules- 2015 ನಿಯಮಗಳನ್ನು ಕೇಂದ್ರ ಸರ್ಕಾರವು ರೂಪಿಸುವ ಅಧಿಕಾರ ಹೊಂದಿರುವುದರಿಂದ ಹಾಗೂ ಪ್ರಸ್ತುತ Letter of Intent ಅವಧಿ ಮುಕ್ತಾಯವಾಗಿರುವುದರಿಂದ ಭಾರತ ಸರ್ಕಾರಕ್ಕೆ ಪತ್ರ ಬರೆಯಲಾಗಿರುತ್ತದೆ. |

**ಸಂಖ್ಯೆ:** ಸಿಐ 45 ಸಿಎಂಸಿ 2026

**(ಎಸ್.ಎಸ್. ಮಲ್ಲಿಕಾರ್ಜುನ್)**
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು